## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 3 ಹೈಕಕೋ 2018

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 06.06.2020

### ಸುತ್ತೋಲೆ

ವಿಷಯ: ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಪಾಲಿಸಬೇಕಾದ ವಿಧಿ-ವಿಧಾನಗಳ ಬಗ್ಗೆ.

ಉಲ್ಲೇಖ:
1. ಸುತ್ತೋಲೆ ಸಂಖ್ಯೆ: ಸಿಆಸುಇ 78 ಹೈಕಕೋ 2014, ದಿನಾಂಕ 22.05.2015,
2. ಸುತ್ತೋಲೆ ಸಂಖ್ಯೆ: ಸಿಆಸುಇ 78 ಹೈಕಕೋ 2014, ದಿನಾಂಕ 16.11.2016,
3. ಸುತ್ತೋಲೆ ಸಂಖ್ಯೆ: ಸಿಆಸುಇ 3 ಹೈಕಕೋ 2019, ದಿನಾಂಕ 23.05.2019.
4. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರ ಪತ್ರ ಸಂಖ್ಯೆ: Secy Est 50/19-20/PSC, ದಿನಾಂಕ 14.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ -(1), (2) ಮತ್ತು (3)ರಲ್ಲಿನ ಸುತ್ತೋಲೆಗಳಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮಿಸಲಾತಿ) ಆದೇಶ, 2013 ರಡಿಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಹುದ್ದೆಗಳನ್ನು ಮೀಸಲಿರಿಸಿ ರಚಿಸಲಾಗಿರುವ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಲ್ಲಿ ನೇರ ನೇಮಕಾತಿಗೆ ಲಭ್ಯವಿರುವ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಉಲ್ಲೇಖಿತ (4)ರ ಪತ್ರದಲ್ಲಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರು ಉಲ್ಲೇಖಿತ (1) ಮತ್ತು (2)ರ ಸುತ್ತೋಲೆಗಳಲ್ಲಿ ನೀಡಲಾದ ಮಾರ್ಗಸೂಚಿಗಳನ್ವಯ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಬಹಳಷ್ಟು ಗೊಂದಲಗಳು ಸೃಜನೆಯಾಗಿದ್ದು, ವಿವಿಧ ನೇಮಕಾತಿ ನಿಯಮಗಳು ಇಲ್ಲಿಯವರೆವಿಗೂ ತಿದ್ದುಪಡಿಯಾಗದೇ ಇರುವುದರಿಂದ ಯಾವ ರೀತಿ ಮುಂದುವರೆಯಬೇಕು ಎಂಬುದರ ಬಗ್ಗೆ ಸೂಕ್ತ ಸ್ಪಷ್ಟೀಕರಣ ಮತ್ತು ನಿರ್ದೇಶನಗಳನ್ನು ಕೋರಿರುತ್ತಾರೆ.

ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರು ಕೋರಿರುವ ಸ್ಪಷ್ಟೀಕರಣ ಮತ್ತು ನಿರ್ದೇಶನಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಸದರಿ ವಿಷಯವನ್ನು ಸಚಿವ ಸಂಪುಟ ಉಪ ಸಮಿತಿಯ ಮುಂದೆ ಮಂಡಿಸಲಾಗಿ, ಈ ಸಂಬಂಧ ಹೊರಡಿಸಲಾಗಿರುವ ಸುತ್ತೋಲೆಗಳನ್ನು ಪರಿಷ್ಕರಿಸಿ / ಹಿಂಪಡೆದು ಸ್ಥಳೀಯ ಮತ್ತು ಮಿಕ್ಕುಳಿದ ವೃಂದದ ಹುದ್ದೆಗಳನ್ನು ಒಂದೇ ಅಧಿಸೂಚನೆ ಮೂಲಕ ನೇಮಕಾತಿ ಮಾಡಲು ಅನುವಾಗುವಂತೆ ಸ್ಥಳೀಯ ಅಭ್ಯರ್ಥಿಗಳು ತಮ್ಮ ಇಚ್ಛೆಯಿಂದ

..............2

ಸ್ಥಳೀಯ ಅಥವಾ ಮಿಕ್ಕುಳಿದ ವೃಂದವನ್ನು ಆಯ್ಕೆ ಮಾಡಿಕೊಳ್ಳಲು ಸ್ಪಷ್ಟವಾದ ಹಾಗೂ ನಿಖರವಾದ ಆಯ್ಕೆಗಳನ್ನು ಅರ್ಜಿ ನಮೂನೆಗಳಲ್ಲಿಯೇ ನಮೂದಿಸಿ ಮಾದರಿ ನಮೂನೆಯನ್ನು ಒಳಗೊಂಡ ಸುತ್ತೋಲೆಯನ್ನು ಹೊರಡಿಸುವಂತೆ ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖಿತ (1) ರ ಸುತ್ತೋಲೆಯಲ್ಲಿನ ನೇರ ನೇಮಕಾತಿಗೆ ಸಂಬಂಧಿಸಿದ ಸ್ಪಷ್ಟೀಕರಣ 3ರ ಅಂಶವನ್ನು ಮಾತ್ರ ಹಾಗೂ ಉಲ್ಲೇಖ (2) ಮತ್ತು (3)ರ ಸುತ್ತೋಲೆಗಳನ್ನು ಸಂಪೂರ್ಣವಾಗಿ ಹಿಂಪಡೆಯಲಾಗಿದೆ.

ಭಾರತದ ಸಂವಿಧಾನದ ಅನುಚ್ಛೇದ 371ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಆದೇಶಗಳನ್ವಯ ವಿವಿಧ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ ವಿವಿಧ ವೃಂದದ ಹುದ್ದೆಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಉದ್ಯೋಗದಲ್ಲಿ ಶೇಕಡಾವಾರು ಮೀಸಲಾತಿ ಒದಗಿಸಿ ಪ್ರತ್ಯೇಕ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳನ್ನು ರಚಿಸಲಾಗಿದೆ.

ಈ ರೀತಿ ಸ್ಥಳೀಯ ಮತ್ತು ಮಿಕ್ಕುಳಿದ ಎರಡೂ ವೃಂದದ ನೇರ ನೇಮಕಾತಿಯ ಬಹು ಆಯ್ಕೆಯ ಹುದ್ದೆಗಳನ್ನು (ಉದಾ: ಗೆಜೆಟೆಡ್ ಪ್ರೊಬೇಷನರ್ಸ್, ಪ್ರ.ದ.ಸ/ ದ್ವಿ.ದ.ಸ. ಬೆರಳಚ್ಚುಗಾರರು/ ಶೀಘ್ರಲಿಪಿಗಾರರು) ಒಟ್ಟಾಗಿ ಭರ್ತಿ ಮಾಡಬೇಕಾದ ಸಂದರ್ಭದಲ್ಲಿ ಮಾತ್ರ ನೇಮಕಾತಿ ಪ್ರಾಧಿಕಾರಗಳಾದ ಕೆ.ಪಿ.ಎಸ್.ಸಿ. ಹಾಗೂ ಇನ್ನಿತರ ನೇಮಕಾತಿ ಸಂಸ್ಥೆಗಳು / ನಿಗಮ/ ಪ್ರಾಧಿಕಾರಗಳು ಏಕ ಕಾಲಕ್ಕೆ ಎರಡೂ ವೃಂದಗಳಿಗೆ ಒಂದೇ ಅಧಿಸೂಚನೆಯಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳಲ್ಲಿ ಲಭ್ಯವಿರುವ ಹುದ್ದೆಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಮೀಸಲಾತಿವಾರು (ನೇರ /ಸಮತಳ) ವರ್ಗೀಕರಣವನ್ನು ಹಾಗೂ ಇನ್ನಿತರ ಅಂಶಗಳನ್ನು ಸ್ಪಷ್ಟವಾಗಿ ನಮೂದಿಸಿ ಒಂದೇ ಅರ್ಜಿಯನ್ನು ಭರ್ತಿ ಮಾಡಲು ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು. ಈ ರೀತಿ ಒಂದೇ ಅರ್ಜಿಯನ್ನು ಅಹ್ವಾನಿಸಿ ಸ್ಥಳೀಯ ಅಭ್ಯರ್ಥಿಗಳಿಂದ ತಮ್ಮ ಇಚ್ಛೆಯಂತೆ ಸ್ಥಳೀಯ ಅಥವಾ ಮಿಕ್ಕುಳಿದ ವೃಂದವನ್ನು ಆಯ್ಕೆ ಮಾಡಿಕೊಳ್ಳಲು ಸ್ಪಷ್ಟ ಹಾಗೂ ನಿಖರ ಆಯ್ಕೆಗಳನ್ನು ಈ ಕೆಳಕಂಡಂತೆ ಒಂದೇ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು ಹಾಗೂ ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲೂ (ಅರ್ಹತೆ / ಆಯ್ಕೆಪಟ್ಟಿ ಸಿದ್ದಪಡಿಸುವಾಗ) ಕೆಳಕಂಡ ಆಯ್ಕೆಗಳನ್ನು ಅಳವಡಿಸಿಕೊಳ್ಳುವುದು.

1. ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳಿಗೆ ಆಯ್ಕೆ ಬಯಸುವಿರಾ?
   **ಹೌದು / ಇಲ್ಲ**
   (ಹೌದು ಎಂದಾದಲ್ಲಿ ಈ ಕೆಳಕಂಡ ಆಯ್ಕೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು)

2. ಮಿಕ್ಕುಳಿದ ವೃಂದದ ಹುದ್ದೆಗಳಿಗೂ ಸಹ ಅರ್ಜಿ ಸಲ್ಲಿಸಲು ಬಯಸುವಿರಾ?
   **ಹೌದು/ ಇಲ್ಲ**

   Note: ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳು ಸ್ಥಳೀಯ ಹಾಗೂ ಮಿಕ್ಕುಳಿದ ಎರಡೂ ವೃಂದದ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

3. ಅರ್ಜಿ ಸಲ್ಲಿಸುವ ಸಮಯದಲ್ಲಿ ನೀವು ನೀಡಿರುವ ಹುದ್ದೆಗಳ ಆದ್ಯತೆಯಂತೆ ಸ್ಥಳೀಯ ಹಾಗೂ ಮಿಕ್ಕುಳಿದ ಎರಡೂ ವೃಂದದಲ್ಲಿ ಒಂದೇ ಹುದ್ದೆಯ ಆಯ್ಕೆಗೆ ಅರ್ಹತೆ ಹೊಂದಿದಲ್ಲಿ ಯಾವ ವೃಂದದ ಹುದ್ದೆಗೆ ಆಯ್ಕೆ ಬಯಸುತ್ತೀರಾ?
   **ಸ್ಥಳೀಯ ವೃಂದ / ಮಿಕ್ಕುಳಿದ ವೃಂದ**

..............3

4. ಅರ್ಜಿ ಸಲ್ಲಿಸುವ ಸಮಯದಲ್ಲಿ ನೀವು ನೀಡಿರುವ ಹುದ್ದೆಗಳ ಆದ್ಯತೆಯಂತೆ ಮಿಕ್ಕುಳಿದ ವೃಂದದಲ್ಲಿ ಸ್ಥಳೀಯ ವೃಂದಕ್ಕಿಂತ ಉತ್ತಮ ಆದ್ಯತೆ ದೊರೆಯುವುದಾದಲ್ಲಿ ಮಿಕ್ಕುಳಿದ ವೃಂದ ಆಯ್ಕೆ ಮಾಡುವಿರಾ?
**ಹೌದು / ಇಲ್ಲ**

Note: ಒಂದು ವೇಳೆ ಸ್ಥಳೀಯ ಅಭ್ಯರ್ಥಿಯು ಮಿಕ್ಕುಳಿದ ವೃಂದದ ಹುದ್ದೆಯನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದಿದಲ್ಲಿ ಅಂಥಹ ಅಭ್ಯರ್ಥಿಗೆ ಜಾರಿಯಲ್ಲಿರುವ ನಿಯಮದಂತೆ ತನ್ನ ಸೇವಾ ಅವಧಿಯಲ್ಲಿ ಅನುಚ್ಛೇಧ 371ಜೆ ಮೀಸಲಾತಿ ಸೌಲಭ್ಯವು ದೊರೆಯುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ.

ಸ್ಥಳೀಯ ಮತ್ತು ಮಿಕ್ಕುಳಿದ ಎರಡೂ ವೃಂದಗಳಿಗೆ ಏಕ ಕಾಲಕ್ಕೆ ಒಂದೇ ಅಧಿಸೂಚನೆಯಲ್ಲಿ ಒಂದೇ ಇಲಾಖೆಯ / ಒಂದೇ ಪದನಾಮದ (ಬಹು ಆಯ್ಕೆಗೆ ಅವಕಾಶವಿಲ್ಲದ) ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಮಾತ್ರ ಕೆ.ಪಿ.ಎಸ್.ಸಿ.ಯು ಸೇರಿದಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಸ್ಥಳೀಯ ವ್ಯಕ್ತಿಗಳಿಗೆ ಈ ಕೆಳಕಂಡ ಆಯ್ಕೆಗಳನ್ನು ಒಂದೇ ಅರ್ಜಿ ಸಮೂನೆಯಲ್ಲಿ ನಮೂದಿಸಿ ಒಂದೇ ಅರ್ಜಿಯನ್ನು ಅಹ್ವಾನಿಸತಕ್ಕದ್ದು.

1. ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳಿಗೆ ಆಯ್ಕೆ ಬಯಸುವಿರಾ?
**ಹೌದು / ಇಲ್ಲ**
(ಹೌದು ಎಂದಾದಲ್ಲಿ ಈ ಕೆಳಕಂಡ ಆಯ್ಕೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು)

2. ಮಿಕ್ಕುಳಿದ ವೃಂದದ ಹುದ್ದೆಗಳಿಗೂ ಸಹ ಅರ್ಜಿ ಸಲ್ಲಿಸಲು ಬಯಸುವಿರಾ?
**ಹೌದು/ ಇಲ್ಲ**

<u>Note:</u> ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳು ಸ್ಥಳೀಯ ಹಾಗೂ ಮಿಕ್ಕುಳಿದ ಎರಡೂ ವೃಂದದ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

3. ಅರ್ಜಿ ಸಲ್ಲಿಸುವ ಸಮಯದಲ್ಲಿ ನೀವು ನೀಡಿರುವ ಹುದ್ದೆಗಳ ಆದ್ಯತೆಯಂತೆ ಸ್ಥಳೀಯ ಹಾಗೂ ಮಿಕ್ಕುಳಿದ ಎರಡೂ ವೃಂದದಲ್ಲಿ ಒಂದೇ ಹುದ್ದೆಯ ಆಯ್ಕೆಗೆ ಅರ್ಹತೆ ಹೊಂದಿದಲ್ಲಿ ಯಾವ ವೃಂದದ ಹುದ್ದೆಗೆ ಆಯ್ಕೆ ಬಯಸುತ್ತೀರಾ?
**ಸ್ಥಳೀಯ ವೃಂದ / ಮಿಕ್ಕುಳಿದ ವೃಂದ**

Note: ಒಂದು ವೇಳೆ ಸ್ಥಳೀಯ ಅಭ್ಯರ್ಥಿಯು ಮಿಕ್ಕುಳಿದ ವೃಂದದ ಹುದ್ದೆಯನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದಿದಲ್ಲಿ ಅಂಥಹ ಅಭ್ಯರ್ಥಿಗೆ ಜಾರಿಯಲ್ಲಿರುವ ನಿಯಮದಂತೆ ತನ್ನ ಸೇವಾ ಅವಧಿಯಲ್ಲಿ ಅನುಚ್ಛೇಧ 371ಜೆ ಮೀಸಲಾತಿ ಸೌಲಭ್ಯವು ದೊರೆಯುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ.

ಇದಲ್ಲದೇ, ಈ ರೀತಿ ಒಂದೇ ಅಧಿಸೂಚನೆ ಮೂಲಕ ಸ್ಥಳೀಯ ಮತ್ತು ಮಿಕ್ಕುಳಿದ ವೃಂದದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹೊರಡಿಸುವ ನೇಮಕಾತಿ ಅಧಿಸೂಚನೆಯಲ್ಲಿ ಈ ಕೆಳಕಂಡ ವಿಶೇಷ ಸೂಚನೆಗಳನ್ನು ಸದರಿ ಅಧಿಸೂಚನೆಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

1. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳು ಸ್ಥಳೀಯ ವೃಂದದ ಹುದ್ದೆ ಹಾಗೂ ಮಿಕ್ಕುಳಿದ ವೃಂದದ ಹುದ್ದೆ ಈ ಎರಡೂ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
2. ಒಂದು ವೇಳೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಯು ಪ್ರಸ್ತುತ ನೇಮಕಾತಿಗೆ ಸಂಬಂದಿಸಿದಂತೆ ಮಿಕ್ಕುಳಿದ ವೃಂದದ ಹುದ್ದೆಯನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಹೊಂದಿದಲ್ಲಿ ಅಂತಹ ಅಭ್ಯರ್ಥಿಯು ಜಾರಿಯಲ್ಲಿರುವ ನಿಯಮದಂತೆ ತನ್ನ ಸೇವಾ ಅವಧಿಯಲ್ಲಿ ಅನುಚ್ಛೇದ 371ಜೆ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು ಅವಕಾಶವಿರುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ.

**ವಿವಿಧ ಆಯ್ಕೆ/ನೇಮಕಾತಿ ಪ್ರಾಧಿಕಾರಗಳು ಈಗಾಗಲೇ ಬಾಕಿ (pipeline cases) ಇರುವ ನೇಮಕಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು:-**

ವಿವಿಧ ಆಯ್ಕೆ/ನೇಮಕಾತಿ ಪ್ರಾಧಿಕಾರಗಳು ಉಲ್ಲೇಖಿತ (2) ರಲ್ಲಿನ ಸುತ್ತೋಲೆಯ ಕ್ರಮ ಸಂಖ್ಯೆ: (2) ರಂತೆ ಈಗಾಗಲೇ ಸ್ಥಳೀಯ ಮತ್ತು ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಪ್ರತ್ಯೇಖವಾಗಿ ಅಧಿಸೂಚನೆಯನ್ನು ಹೊರಡಿಸಿ ಉಲ್ಲೇಖಿತ (3)ರ ಸುತ್ತೋಲೆಯಂತೆ ಒಂದೇ ಪರೀಕ್ಷೆಯನ್ನು ನಡೆಸಿ ನೇಮಕಾತಿ ಪ್ರಕ್ರಿಯೆ ಕೈಗೊಂಡು ಆಯ್ಕೆ ಪಟ್ಟಿ ಪ್ರಕಟಿಸಲು ಬಾಕಿ ಇರುವ ಪ್ರಕರಣಗಳಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಪ್ರತ್ಯೇಖ ಆಯ್ಕೆಪಟ್ಟಿಗಳನ್ನು ತಯಾರಿಸಿ ಅಂತಿಮಗೊಳಿಸತಕ್ಕದ್ದು. ಈ ರೀತಿ ಅಂತಿಮಗೊಳಿಸುವಲ್ಲಿ ಎರಡೂ ವೃಂದಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಂದ ಯಾವುದೇ ಹಂತದಲ್ಲಿ ಆಯ್ಕೆ ಪಡೆಯುವಂತಿಲ್ಲ.

ಇನ್ನೂ ಕೆಲವು ಪ್ರಕರಣಗಳಲ್ಲಿ ನೇಮಕಾತಿ ಪ್ರಾಧಿಕಾರಗಳು ಸರ್ಕಾರದ ಉಲ್ಲೇಖಿತ (1)ರ ಸುತ್ತೋಲೆಯಂತೆ ಈ ಹಿಂದೆ ಒಂದೇ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಪ್ರಕ್ರಿಯೆಯನ್ನು ಇಲ್ಲಿಯವರೆಗೂ ಮುಕ್ತಾಯಗೊಳಿಸದೇ ಇದ್ದಲ್ಲಿ, ಅಂತಹ ಪ್ರಕರಣಗಳಿಗೆ ಸೀಮಿತವಾಗುವಂತೆ ಮಾತ್ರ ಆಯ್ಕೆ ಪಟ್ಟಿಯನ್ನು ತಯಾರಿಸುವಾಗ ಉಲ್ಲೇಖಿತ (2) ರ ಸುತ್ತೋಲೆಯ ಕ್ರಮ ಸಂಖ್ಯೆ: (4)ರಂತೆ

...............5

ಮೊದಲು ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ ಆಯ್ಕೆ ಪಟ್ಟಿಯನ್ನು ತಯಾರಿಸುವುದು ಹಾಗೂ ತದನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ತಯಾರಿಸುವುದು.

V. Akkamahadevi 06/6/2020

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು,
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
3. ಪ್ರಾದೇಶಿಕ ಆಯುಕ್ತರುಗಳು ಕಲಬುರಗಿ ವಿಭಾಗ / ಬೆಂಗಳೂರು ವಿಭಾಗ.
4. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
6. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ / ಕಲಬುರಗಿ / ರಾಯಚೂರು / ಕೊಪ್ಪಳ/ ಯಾದಗಿರಿ / ಬಳ್ಳಾರಿ / ಬೀದರ್ ಜಿಲ್ಲೆ.
7. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ / ಕಲಬುರಗಿ / ರಾಯಚೂರು / ಕೊಪ್ಪಳ/ ಯಾದಗಿರಿ / ಬಳ್ಳಾರಿ / ಬೀದರ್ ಜಿಲ್ಲೆ.
8. ಎಲ್ಲಾ ವಿಶ್ವ ವಿದ್ಯಾಲಯಗಳ ಕುಲಸಚಿವರುಗಳು.
9. ಹೆಚ್ಚುವರಿ ಪ್ರತಿ / ಶಾಕಾ ರಕ್ಷಾ ಕಡತ.